2016 ಕ.ತೀ.ವ. 935

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಆನಂದ್ ಬೈರಾರೆಡ್ಡಿ
ಮತ್ತು ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ಎಸ್. ಸುಜಾತ

## ಶ್ರೀ ಎಂ. ಪ್ರಕಾಶ್ ಮತ್ತು ಇನ್ನೊಬ್ಬರು – ವಿರುದ್ಧ – ಶ್ರೀ ಅಲ್ಲಮ್ ಗುರುಬಸವರಾಜ್ ಮತ್ತು ಇತರರು *

ನ್ಯಾಯಾಲಯ ನಿಂದನಾ ಅಧಿನಿಯಮ, 1971–15ನೇ ಪ್ರಕರಣ –

ವಿವಾದಗಳು ಅಂತಿಮತೆಯನ್ನು ತಲುಪಿದ್ದರೂ ಸಹ ಪ್ರತ್ಯರ್ಜಿದಾರರು ದಾವೆಗಳನ್ನು ನಿರಂತರವಾಗಿ ಹೂಡುವುದನ್ನು ಅವಲಂಬಿಸಿರುವ ಪ್ರಕರಣಗಳಲ್ಲಿ, ಅದು ನ್ಯಾಯಾಲಯ ನಿಂದನೆಗೆ ಸಮಾನವಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ.

ಇದೊಂದು ಸಮರ್ಥಿಸಬಹುದಾದ ಅಥವಾ ಸಮರ್ಥಿಸಲಾಗದ ಚಲಾಯಿತ ಹಕ್ಕಾಗಿದೆ. ಅದನ್ನು ಸಮರ್ಥಿಸಲು ಎತ್ತಲಾದ, ದಾವೆಯಲ್ಲಿನ ವಾದಗಳನ್ನು ಸುಸ್ಥಾಪಿಸುವುದು ಫಿರ್ಯಾದುದಾರನಿಗೆ ಸೇರಿದ ವಿಷಯವಾಗಿದ್ದು, ಅದು ಯಾವಾಗಲೂ ಅವನಿಗೆ ಲಭ್ಯವಾದುದಾಗಿದೆ.

ನಮ್ಮ ಅಭಿಪ್ರಾಯದಲ್ಲಿ ಫಿರ್ಯಾದುದಾರನು ಪ್ರತ್ಯರ್ಜಿದಾರರ – ಆಪಾದಿತರ ವಿರುದ್ಧವಾಗಿ ನ್ಯಾಯಾಲಯದ ಕ್ರಿಮಿನಲ್ ನಿಂದನೆಯ ಮೊಕದ್ದಮೆ ಹೂಡಿರುವುದಿಲ್ಲ. ಹೀಗಾಗಿ, ನ್ಯಾಯಾಲಯ ನಿಂದನಾ ಮೊಕದ್ದಮೆಯನ್ನು ವಜಾಗೊಳಿಸಿದೆ.

* ಕ್ರಿಮಿನಲ್ ಸಿ.ಸಿ.ಸಿ. ಸಂ. 100001/2014, ದಿನಾಂಕ: 3ನೇ ಆಗಸ್ಟ್, 2015.

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾಗಳಲ್ಲಿ***

*1. ಐಎಲ್‌ಆರ್ 1990 ಕೆಎಆರ್ 4179*
*ವಿಜಯ ಬ್ಯಾಂಕ್ ಉದ್ಯೋಗಿಗಳ ವಸತಿ*
*ಸಹಕಾರ ಸಂಘ ನಿಯಮಿತ –ವಿರುದ್ಧ– ನುನೀರಪ್ಪ (ಉಲ್ಲೇ) 7*

*2. ಐಎಲ್‌ಆರ್ 2009 ಕೆಎಆರ್ 3302*
*ಶ್ರೀ ಆರ್. ಸಡಗೋಪನ್ –ವಿರುದ್ಧ–*
*ಶ್ರೀ ಕೆ. ರಾಜಯ್ಯ (ಉಲ್ಲೇ) 7*

*3. (2008) 1 ಎಸ್‌ಸಿಸಿ 560*
*ಉದ್ಯಮಿ ಏವಂ ಖಾದಿ ಗ್ರಾಮೋದ್ಯೋಗ*
*ಕಲ್ಯಾಣ ಸಂಸ್ಥೆ ಮತ್ತು ಇನ್ನೊಬ್ಬರು –ವಿರುದ್ಧ–*
*ಉತ್ತರ ಪ್ರದೇಶ ರಾಜ್ಯ ಹಾಗೂ ಇನ್ನೊಬ್ಬರು (ಉಲ್ಲೇ) 8*

ಫಿರ್ಯಾದುದಾರರ ಪರ : ಶ್ರೀ ದಿನೇಶ್ ಎಂ. ಕುಲಕರ್ಣಿ, ವಕೀಲರು.
ಆಪಾದಿತರ ಪರ : ಶ್ರೀ ಎಸ್.ಎಸ್. ಯಡ್ರಾಮಿ, ವಕೀಲರು.

**ಆಜ್ಞೆ**

**ನ್ಯಾಯಮೂರ್ತಿ ಶ್ರೀ ಆನಂದ್ ಬೈರಾರೆಡ್ಡಿ** :

ಫಿರ್ಯಾದುದಾರರ ಪರ ಮಾನ್ಯ ವಕೀಲರ ವಾದವನ್ನು ಆಲಿಸಲಾಗಿದೆ.

2. ಫಿರ್ಯಾದುದಾರರ ಕುಟುಂಬ ಸದಸ್ಯನೆಂದು ಹೇಳಲಾದ ಡಾ॥ ಮಲ್ಲಿಕಾರ್ಜುನಯ್ಯ, ಫಿರ್ಯಾದುದಾರರ ಮತ್ತು ತನ್ನ ತಂದೆಯ ಹಾಗೂ ಒಟ್ಟು ಕುಟುಂಬದ ಇತರ ಸದಸ್ಯರ ವಿರುದ್ಧ ಪಾಲಿಗಾಗಿ ಮತ್ತು ಪ್ರತ್ಯೇಕ

ಸ್ವಾಧೀನಕ್ಕಾಗಿ ದಾವೆ ಹೂಡಿದ್ದಾರೆ. ಸದರಿ ದಾವೆಯಾದ ಮೂಲದಾವೆ ಸಂಖ್ಯೆ 105/1977ರ ಇತ್ಯರ್ಥದ ಅವಧಿಯಲ್ಲಿ, ಬಳ್ಳಾರಿಯ ಸಿವಿಲ್ ನ್ಯಾಯಾಧೀಶರ (ಹಿರಿಯ ವಿಭಾಗ) ಕಡತದಲ್ಲಿ, ಒಟ್ಟು ಕುಟುಂಬದ ಇಬ್ಬರು ಸದಸ್ಯರ ವಿರುದ್ಧ ಅನುಕ್ರಮವಾಗಿ 1997ರ ಐ.ಸಿ. ಸಂಖ್ಯೆ 4 ಮತ್ತು 5ರಲ್ಲಿ ದಿವಾಳಿ ಅರ್ಜಿಗಳನ್ನು ದಾಖಲಿಸಿರುತ್ತಾರೆಂದು ತಿಳಿದುಬರುತ್ತದೆ. ಅಧಿಕೃತ ಸ್ವೀಕರ್ತನು ಜಂಟಿ ಕುಟುಂಬದ ಸ್ವತ್ತುಗಳ ಸ್ವಾಧೀನವನ್ನು ಹೊಂದಿರುತ್ತಾನೆಂದು ಹೇಳಲಾಗಿದೆ ಮತ್ತು ಆದುದರಿಂದ, ಅವನನ್ನು ಮೂಲ ದಾವೆ ಸಂಖ್ಯೆ 105/1997ರಲ್ಲಿನ ಪ್ರತಿವಾದಿಗಳ ಪೈಕಿ ಒಬ್ಬನೆಂದು ಸೇರಿಸಲಾಗಿರುತ್ತದೆ. ಪಾಲು ದಾವೆಯು ಇತ್ಯರ್ಥದಲ್ಲಿರುವ ಅವಧಿಯಲ್ಲಿ ಅಧಿಕೃತ ಸ್ವೀಕರ್ತನು ಸ್ವತ್ತುಗಳನ್ನು ಮಾರಾಟ ಮಾಡಲು ಪ್ರಯತ್ನಿಸಿದ್ದಾನೆಂದು ಮತ್ತು ಅದನ್ನು ಬಳ್ಳಾರಿಯ ಮೆ॥ ವೀರಶೈವ ವಿದ್ಯಾವರ್ಧಕ ಸಂಘದ ಹೆಸರಿಗೆ ಮಾರಾಟ ಮಾಡಲಾಯಿತೆಂದು ಹೇಳಲಾಗಿದೆ. ಇನ್ನೂ ಎರಡು ಸ್ವತ್ತುಗಳನ್ನು ಅನುಕ್ರಮವಾಗಿ ಬಂಗಾರಿ ಈರಮ್ಮ ಹಾಗೂ ಗೌಡರ್ ಶರಣಮ್ಮನಿಗೆ ಮಾರಲಾಯಿತು. ಮೂಲ ದಾವೆ ಸಂಖ್ಯೆ 105/1977ನ್ನು ಡಿಕ್ರಿಗೊಳಿಸಿರುವುದರಿಂದಾಗಿ ಅದರ ತೀರ್ಪು ಮತ್ತು ಡಿಕ್ರಿಯಿಂದ ಬಾಧಿತನಾಗಿ, ಅಧಿಕೃತ ಸ್ವೀಕರ್ತನು ಆರ್‌ಎಫ್‌ಎ ಸಂಖ್ಯೆ 292/1982ರಲ್ಲಿ ಈ ನ್ಯಾಯಾಲಯದ ಮುಂದೆ ಅಪೀಲಿನ ಮೂಲಕ ಅದನ್ನು ಪ್ರಶ್ನಿಸಿದ್ದಾನೆಂದು ಹೇಳಲಾಗಿದ್ದು, ಅದನ್ನು ಅಂತಿಮವಾಗಿ ವಜಾಗೊಳಿಸಲಾಯಿತು ಮತ್ತು ಆದೇಶವು ಅಂತಿಮತೆಯನ್ನು ಹೊಂದಿರುತ್ತದೆ. ಆ ನಂತರ ಡಿಕ್ರಿದಾರನು ತನ್ನ ಷೇರು ಮತ್ತು ಇತರ ಪರಿಹಾರಗಳ ನಿರ್ಧಾರಕ್ಕಾಗಿ ಎಫ್‌ಡಿಪಿ ಸಂಖ್ಯೆ 59/1989ರಲ್ಲಿ ಅಂತಿಮ ಡಿಕ್ರಿ ವ್ಯವಹರಣೆಗಳನ್ನು ಹೂಡಿದ್ದು, ಅದನ್ನು ಪುರಸ್ಕರಿಸಲಾಗಿದೆಯೆಂದು ಹೇಳಲಾಗಿದೆ. ಎಫ್‌ಡಿಪಿ ಸಂಖ್ಯೆ 59/1989ರಲ್ಲಿ ಹೊರಡಿಸಲಾದ ಡಿಕ್ರಿಯಿಂದ ಬಾಧಿತನಾಗಿ ಸ್ವೀಕರ್ತನು ಬಳ್ಳಾರಿಯ IIನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಆರ್.ಎ.ಸಂಖ್ಯೆ 134/2006ರಲ್ಲಿ ನಿಯತ ಅಪೀಲನ್ನು ಸಲ್ಲಿಸಿದ್ದು, ಅದನ್ನು ವಜಾ ಮಾಡಲಾಯಿತೆಂದು ಹೇಳಲಾಗಿದೆ. ಅಂತಿಮ ಡಿಕ್ರಿ ವ್ಯವಹರಣೆಗಳನ್ನು ಹೊರಡಿಸಿದ ನಂತರ, ಎಫ್‌ಡಿಪಿ ಸಂ.59/1989ರಲ್ಲಿ ಡಿಕ್ರಿಯ ಅಮಲ್ಜಾರಿಯನ್ನು ಕೋರಿ, ಫಿರ್ಯಾದುದಾರನು ಇ.ಪಿ.ಸಂಖ್ಯೆ 250/2006ರಲ್ಲಿ ಅಮಲ್ಜಾರಿ ವ್ಯವಹರಣೆಗಳನ್ನು ದಾಖಲಿಸಿದ್ದಾನೆಂದು, ಫಿರ್ಯಾದುದಾರನು ಕ್ಲೇಮು ಮಾಡುತ್ತಾನೆ. ಅಧಿಕೃತ

ಸ್ವೀಕರ್ತನಿಂದ ಸ್ವತ್ತನ್ನು ಖರೀದಿಸಿದವರು, ಅಂದರೆ, ಮೆ॥ ವೀರಶೈವ ವಿದ್ಯಾವರ್ಧಕ ಸಂಘದವರು ಹಾಜರಾಗಿದ್ದು, ಸಿವಿಲ್ ಪ್ರಕ್ರಿಯಾ ಸಂಹಿತೆಯ ಆದೇಶ XXI ಕ್ರಮಾದೇಶ 91ರಡಿಯಲ್ಲಿ ಪ್ರತಿರೋಧಕವಾಗಿ ಅರ್ಜಿಯನ್ನು ಸಲ್ಲಿಸಿದ್ದಾರೆಂದು ಹೇಳಲಾಗಿದೆ. ಫಿರ್ಯಾದುದಾರನು ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾನೆ ಮತ್ತು ಸಂಘವು ಹಾಗೆ ಪ್ರತಿರೋಧಕವಾಗಿ ಅರ್ಜಿ ಸಲ್ಲಿಸಲಾಗದು ಎಂದು ವಾದಿಸಿದ್ದಾನೆ. ಮಾನ್ಯ ಸಿವಿಲ್ ನ್ಯಾಯಾಧೀಶರು ಆಕ್ಷೇಪಣೆಯನ್ನು ತಳ್ಳಿಹಾಕಿದ್ದಾರೆಂದು ಹಾಗೂ ವಿಷಯವನ್ನು ವಿಚಾರಣೆಗಾಗಿ ಕಳುಹಿಸಿದ್ದಾರೆಂದು ಹೇಳಲಾಗಿದೆ. ಫಿರ್ಯಾದುದಾರನು ಆ ನಂತರ ರಿಟ್ ಅರ್ಜಿ ಸಂಖ್ಯೆ 5070/2007ರಲ್ಲಿ ಈ ನ್ಯಾಯಾಲಯದ ಮುಂದೆ ರಿಟ್ ಅರ್ಜಿಯ ಮೂಲಕ ಸದರಿ ಆದೇಶವನ್ನು ಪ್ರಶ್ನಿಸಿದ್ದು, ಅದನ್ನು ಪುರಸ್ಕರಿಸಲಾಗಿದೆ ಮತ್ತು ಸಂಘವು, ಅಧಿಕೃತ ಸ್ವೀಕರ್ತನ ಮುಖಾಂತರ ಸ್ವತ್ತು ಖರೀದಿಸುವಲ್ಲಿ ಅವನೊಂದಿಗೆ ಕೈಜೋಡಿಸಿರುವ ಕಾರಣ, ಅದಕ್ಕೆ ಪ್ರತಿರೋಧಕವಾಗಿ ಅರ್ಜಿ ಸಲ್ಲಿಸುವ ಅಧಿಕಾರವಿಲ್ಲ ಎಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟಿರುತ್ತದೆ. ಸಂಘದ ಪದಾಧಿಕಾರಿಗಳೆಂದು ಹೇಳಲಾಗಿರುವ ಪ್ರತ್ಯರ್ಜಿದಾರರು, ಆ ನಂತರ ಪ್ರಾರಂಭಿಕ ಡಿಕ್ರಿ ಹಾಗೂ ಅಂತಿಮ ಡಿಕ್ರಿ ವ್ಯವಹರಣೆಗಳನ್ನು ಹಾಗೂ ಅಮಲ್ಜಾರಿ ವ್ಯವಹರಣೆಗಳನ್ನೂ ಸಹ ಪ್ರಶ್ನಿಸಿ, ಮೂಲ ದಾವೆ ಸಂಖ್ಯೆ 58/2013ರಲ್ಲಿ ದಾವೆ ಹೂಡಿರುತ್ತಾರೆ ಮತ್ತು ಬಳ್ಳಾರಿಯ ಪ್ರಧಾನ ಸಿವಿಲ್ ನ್ಯಾಯಾಧೀಶರ (ಹಿರಿಯ ವಿಭಾಗ) ಮುಂದೆ ದಿನಾಂಕ 11.10.2013ರಂದು ಆರ್.ಎ.ಸಂಖ್ಯೆ 104/2013ರಲ್ಲಿ ಅಪೀಲು ಹೂಡಿರುತ್ತಾರೆ.

3. ಅಧಿಕೃತ ಸ್ವೀಕರ್ತನು ಪ್ರಾರಂಭಿಕ ಡಿಕ್ರಿ ಹಾಗೂ ಅಂತಿಮ ಡಿಕ್ರಿಯನ್ನು ಈಗಾಗಲೇ ಪ್ರಶ್ನಿಸಿರುವುದರಿಂದಾಗಿ, ಮೂಲ ದಾವೆ ಹೂಡಿರುವುದನ್ನು ಪ್ರಶ್ನಿಸಲು ಸಂಘಕ್ಕೆ ಯಾವುದೇ ಅಧಿಕಾರವಿಲ್ಲ ಮತ್ತು ಸಂಘವು ಹೂಡಿದ ನಿಯತ ಅಪೀಲು ಕಾನೂನು ಪ್ರಕ್ರಿಯೆಯ ದುರುಪಯೋಗವಾಗಿದೆ ಹಾಗೂ ಅದು ರಿಟ್ ಅರ್ಜಿ ಸಂಖ್ಯೆ 5070/2007ರಲ್ಲಿ ಈ ನ್ಯಾಯಾಲಯವು ಹೊರಡಿಸಿದ ಆದೇಶಗಳ ಉಲ್ಲಂಘನೆಯಾಗಿರುತ್ತದೆ ಮತ್ತು ಆದುದರಿಂದ ನ್ಯಾಯಾಲಯಗಳ ನಿಂದನೆ

ಅಧಿನಿಯಮ, 1971ರ 15ನೇ ಪ್ರಕರಣದಡಿ ಸದ್ಯದ ನಿಂದನೆ ಅರ್ಜಿಯನ್ನು ಮಂಡಿಸಲಾಗಿದೆ ಎಂದು ಫಿರ್ಯಾದುದಾರನು ಕ್ಲೇಮು ಮಾಡಿರುತ್ತಾನೆ. ಫಿರ್ಯಾದುದಾರನು ಮೊದಲ ಸಂದರ್ಭದಲ್ಲಿ, ರಾಜ್ಯದ ಅಡ್ವೊಕೇಟ್ ಜನರಲ್‌ರವರನ್ನು ಭೇಟಿಯಾಗಿದ್ದಾನೆ ಮತ್ತು ಅದಕ್ಕೆ ಪ್ರತಿಯಾಗಿ ಅಡ್ವೊಕೇಟ್ ಜನರಲ್‌ರವರು ಈ ದೂರನ್ನು ನೀಡಲು ಅನುಮತಿಸಿದ್ದಾರೆ ಮತ್ತು ಹೀಗಾಗಿ, ಸದ್ಯದ ದೂರನ್ನು ನೀಡಲಾಗಿದೆ.

4. ಪ್ರತ್ಯರ್ಜಿದಾರರು ವಕೀಲರ ಮುಖಾಂತರ ಹಾಜರಾಗಿದ್ದಾರೆ ಮತ್ತು ವಿವರವಾದ ಆಕ್ಷೇಪಣಾ ಪಟ್ಟಿಯನ್ನು ದಾಖಲಿಸಿದ್ದಾರೆ. ಆಕ್ಷೇಪಣೆಗಳ ಪಟ್ಟಿಯು, ಇತರ ವಿಷಯುಗಳ ಜೊತೆಗೆ, ಮೂಲ ದಾವೆ ಸಂಖ್ಯೆ 105/1977ರಲ್ಲಿ ತೀರ್ಪು ಹಾಗೂ ಡಿಕ್ರಿಗೆ ಅಧಿಕೃತ ಸ್ವೀಕರ್ತನ ಪ್ರಶ್ನೆಯು, ಆರ್‌ಎಫ್‌ಎ ಸಂಖ್ಯೆ 292/1982ರಲ್ಲಿ, ಈ ನ್ಯಾಯಾಲಯದ ಮುಂದೆ ಅಪೀಲು ಹೂಡುವಂತೆ ಮಾಡಿರುತ್ತದೆ ಮತ್ತು ಈ ನ್ಯಾಯಾಲಯವು ಅಪೀಲನ್ನು ವಜಾ ಮಾಡಿದ್ದರೂ, ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

> *"ಆದಾಗ್ಯೂ, ಈಗಾಗಲೇ ಅಧಿಕೃತ ಸ್ವೀಕರ್ತನ ಪರವಾಗಿ ವಾದಿಸಿರುವಂತೆ, ಪಾಲು ಮಾಡಲಾದ ಸ್ವತ್ತು ಅಥವಾ ಅದರ ಯಾವುದೇ ಭಾಗವನ್ನು, ಡಿಕ್ರಿಗೊಳಿಸುವ ಸಮಯಕ್ಕೆ ಅವರಲ್ಲಿ ನಿಹಿತಗೊಳಿಸಲಾಗಿದೆಯೆಂದು ಸ್ಪಷ್ಟಪಡಿಸಿದ್ದರೂ ಸಹ, ಈ ವ್ಯವಹರಣೆಗಳಲ್ಲಿ ಒಳಗೊಂಡಿರುವ ಸ್ವತ್ತುಗಳಲ್ಲಿ ಆ ಮೂಲಕ ಅವನು ಹೊಂದಿರಬಹುದಾದ ಹಿತಾಸಕ್ತಿಯನ್ನು ಉಳಿಸಿಕೊಳ್ಳಲು, ಕಾನೂನಿನಲ್ಲಿ ಲಭ್ಯವಿರುವಂತೆ ಅಂಥ ಕ್ರಮಗಳನ್ನು ಕೈಗೊಳ್ಳುವುದು ಅವನಿಗೇ ಬಿಟ್ಟ ವಿಷಯವಾಗಿದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ".*

5. ಆದುದರಿಂದ, ಅಧಿಕೃತ ಸ್ವೀಕರ್ತನ ಅಧೀನದಲ್ಲಿ ಕ್ಲೇಮು ಮಾಡುವಂತೆ ಪ್ರತ್ಯರ್ಜಿದಾರರಿಗೆ ಅನುಕೂಲವಾಗುವಂತಹ ಲಭ್ಯವಿರುವ ಯಾವುದೇ ಪರಿಹಾರವನ್ನು ಪಡೆಯಲು ಅಧಿಕೃತ ಸ್ವೀಕರ್ತನಿಗೆ ಈ ನ್ಯಾಯಾಲಯವು ಅವಕಾಶ ನೀಡುತ್ತದೆ ಮತ್ತು ಈಗ ಹೂಡಿದ ದಾವೆಯನ್ನು ಕಾನೂನು ಪ್ರಕ್ರಿಯೆಯ ದುರುಪಯೋಗವೆಂದು ಪರಿಗಣಿಸಲಾಗುವುದಿಲ್ಲವೆಂದು ವಾದಿಸಲಾಗಿದೆ. ಫಿರ್ಯಾದುದಾರನ ಪ್ರಕಾರ, ಅದು ಸಮರ್ಥನೀಯವಲ್ಲದ ಮತ್ತು ಕಾನೂನು ಪ್ರಕ್ರಿಯೆಯ ದುರುಪಯೋಗವೆಂದು ಪರಿಗಣಿಸಲಾದ ದಾವೆಯಾಗಿದ್ದಲ್ಲಿ, ಅಧಿವಿಚಾರಣಾ ನ್ಯಾಯಾಲಯದ ಮುಂದೆ ಪೂರ್ವನ್ಯಾಯನಿರ್ಣಯದ ಮೂಲಕ ದಾವೆಯನ್ನು, ಪ್ರತಿಷೇಧಿಸಲಾಗಿದ್ದು, ಅದು ಪ್ರಾರಂಭಿಕ ವಿವಾದಾಂಶವಾಗಿ ವ್ಯವಹರಿಸುತ್ತದೆ ಮತ್ತು ದಾವೆಯನ್ನು ವಜಾಗೊಳಿಸಲೂಬಹುದಾಗಿದೆ. ಆದರೆ, ಪ್ರತ್ಯರ್ಜಿದಾರರು ಅವರು ಹೊಂದಿರುವ ಹಕ್ಕಾದ, ವ್ಯವಹರಣೆಗಳನ್ನು ಪ್ರಾರಂಭಿಸುವುದರಿಂದ ಹೊರತಾಗಿದ್ದಾರೆಂದು ಹೇಳಲಾಗುವುದಿಲ್ಲ. ಅಲ್ಲದೆ, ಸ್ವೀಕರ್ತನ ಮುಖಾಂತರ ಸ್ವತ್ತುಗಳನ್ನು ಖರೀದಿಸಿದ ಇನ್ನೂ ಇಬ್ಬರು ಖರೀದಿದಾರರಿದ್ದರೆಂದು ಮತ್ತು ಆ ಖರೀದಿದಾರರು ಅದೇ ಆಧಾರದಲ್ಲಿ ದಾವೆ ಹೂಡಿದ್ದಾರೆ ಮತ್ತು ಅದನ್ನು ಡಿಕ್ರಿಗೊಳಿಸಲಾಗಿದೆಯೆಂದು ಸಹ ಹೇಳಲಾಗಿದೆ. ಫಿರ್ಯಾದಿಯು ಅದನ್ನು ಪ್ರಶ್ನಿಸಿದ್ದಾನೆ ಮತ್ತು ಹೂಡಲಾದ ನಿಯತ ಅಪೀಲುಗಳನ್ನು ವಜಾಗೊಳಿಸಲಾಗಿದೆ ಮತ್ತು ಎರಡನೇ ಅಪೀಲುಗಳು ಈ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿವೆ. ಆದುದರಿಂದ, ಇನ್ನೂ ತಮ್ಮ ಸರದಿಯನ್ನು ಪಡೆದುಕೊಳ್ಳಲು ಅನುಮತಿಸಲಾದ ವ್ಯವಹರಣೆಗಳು ಇರುವುದರಿಂದಾಗಿ, ಪ್ರತ್ಯರ್ಜಿದಾರರು ಪ್ರಾರಂಭಿಸಿದ ಅದೇ ಸ್ವರೂಪದ ಸದ್ಯದ ವ್ಯವಹರಣೆಗಳನ್ನು ನ್ಯಾಯಾಲಯನಿಂದನೆಯೆಂದು ನಿರೂಪಿಸಲಾಗುವುದಿಲ್ಲ ಮತ್ತು ಕಾನೂನಿನ ಅನುಸಾರ ಪ್ರತ್ಯರ್ಜಿದಾರರು ಚಲಾಯಿಸಿದ ಅಧಿಕಾರವನ್ನು ಕ್ರಿಮಿನಲ್ ನಿಂದನೆಯೆಂದು ನಿರೂಪಿಸುವ ಮೂಲಕ ಪ್ರತಿಬಂಧಿಸಲಾಗುವುದಿಲ್ಲವೆಂದು ಸಹ ಸಮರ್ಥಿಸಲು ಕೋರಲಾಗಿದೆ.

6. ಹಾಗಿದ್ದರೂ ಫಿರ್ಯಾದುದಾರನ ಪರ ಮಾನ್ಯ ವಕೀಲರು, ಪ್ರತ್ಯರ್ಜಿದಾರರ ವರ್ತನೆಯ ಮೇಲೆ ಒತ್ತು ನೀಡಿದ್ದಾರೆ ಮತ್ತು ಅಂತಿಮತೆಯನ್ನು ಹೊಂದಿರುವ

ವಿಷಯಗಳನ್ನು ಫಿರ್ಯಾದುದಾರನ ಪೂರ್ವಾಗ್ರಹಕ್ಕೆ ತಕ್ಕಂತೆ ಮರು–ವಾದ ಮಾಡಲಾಗುವುದಿಲ್ಲವೆಂದು ಸೂಚಿಸಿದ್ದಾರೆ ಮತ್ತು ಡಿಕ್ರಿಯ ಫಲಿತಾಂಶವನ್ನು ಫಿರ್ಯಾದುದಾರನಿಗೆ ನಿರಾಕರಿಸಿರುವುದು ಫಿರ್ಯಾದುದಾರನಿಗೆ ಉಂಟಾದ ಗಂಭೀರ ಪೂರ್ವಾಗ್ರಹವಾಗಿದೆ ಹಾಗೂ ಅದು ನಿಶ್ಚಿತವಾಗಿ ಈ ನ್ಯಾಯಾಲಯವು ನೀಡಿದ ಹಲವಾರು ತೀರ್ಮಾನಗಳಲ್ಲಿ ವಿಧಿಸಲಾದಂತೆ ಕ್ರಿಮಿನಲ್ ನಿಂದನೆಗೆ ಸಮಾನವಾಗುತ್ತದೆಂದು ಹೇಳಿದ್ದಾರೆ.

7. ಮಾನ್ಯ ವಕೀಲರು, (i) ***ವಿಜಯ ಬ್ಯಾಂಕ್ ಉದ್ಯೋಗಿಗಳ ವಸತಿ ಸಹಕಾರ ಸಂಘ ನಿಯಮಿತ –ವಿರುದ್ಧ– ನುನೀರಪ್ಪ [1],*** ಹಾಗೂ (ii) ***ಶ್ರೀ ಆರ್. ಸಡಗೋಪನ್ –ವಿರುದ್ಧ– ಶ್ರೀ ಕೆ. ರಾಜಯ್ಯ [2],*** ಪ್ರಕರಣದ ಮೇಲೆ ಅವಲಂಬಿತರಾಗಿದ್ದು, ಒಂದೇ ರೀತಿಯ ಸನ್ನಿವೇಶಗಳಲ್ಲಿ ಈ ನ್ಯಾಯಾಲಯವು ಡಿಕ್ರಿಯ ಫಲಿತಾಂಶಗಳನ್ನು ಪಡೆಯುವುದರಿಂದ ಡಿಕ್ರಿದಾರನನ್ನು ತಡೆಯಲು ದಾವೆಯ ನಂತರ ದಾವೆ ಮತ್ತು ಅರ್ಜಿಯ ನಂತರ ಅರ್ಜಿಯನ್ನು ತರುವ ಇಂಥ ಅಭ್ಯಾಸಗಳ ಬಗ್ಗೆ ಕಟ್ಟುನಿಟ್ಟಾದ ದೃಷ್ಟಿಕೋನವನ್ನು ಹೊಂದಿದೆ ಹಾಗೂ ಮುಂದಿನ ವ್ಯವಹರಣೆಗಳನ್ನು ಕಾನೂನು ಪ್ರಕಾರ ಕೈಗೊಳ್ಳಲಾಗುವುದೆಂದು ಅಭಿಪ್ರಾಯ ಪಟ್ಟಿದೆ.

8. ಮಾನ್ಯ ವಕೀಲರ ವಾದವನ್ನು ವಿವರವಾಗಿ ಆಲಿಸಲಾಗಿದೆ ಮತ್ತು ಮೇಲಿನ ಸಂಗತಿಗಳು ಹಾಗೂ ಸನ್ನಿವೇಶಗಳನ್ನು ಗಮನಿಸಲಾಗಿದೆ. ಫಿರ್ಯಾದುದಾರನಿಗೆ ಮಂಜೂರಾತಿ ನೀಡುವ ಅಡ್ವೊಕೇಟ್ ಜನರಲ್‌ರವರು, ವಿವಾದಗಳು ಅಂತಿಮತೆಯನ್ನು ತಲುಪಿದ್ದರೂ ಸಹ ಪ್ರತ್ಯರ್ಜಿದಾರರು ದಾವೆಗಳನ್ನು ನಿರಂತರವಾಗಿ ಹೂಡುವುದನ್ನು ಅವಲಂಬಿಸಿರುವ ಪ್ರಕರಣಗಳಲ್ಲಿ, ಅದು ನ್ಯಾಯಾಲಯ ನಿಂದನೆಗೆ ಸಮಾನವಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಈ ಮೇಲೆ ಉಲ್ಲೇಖಿಸಲಾದ ನಿರ್ಣಯಗಳ ಮೇಲೆ

1. ಐಎಲ್‌ಆರ್ 1990 ಕೆಎಆರ್ 4179 2. ಐಎಲ್‌ಆರ್ 2009 ಕೆಎಆರ್ 3302

ಎಂದರೆ, ***ಶ್ರೀ ಆರ್. ಸಡಗೋಪನ್ –ವಿರುದ್ಧ– ಶ್ರೀ ಕೆ. ರಾಜಯ್ಯ*** (ಮೇಲಿನಂತೆ) ಹಾಗೂ ***ಉದ್ಯಮಿ ಏವಂ ಖಾದಿ ಗ್ರಾಮೋದ್ಯೋಗ ಕಲ್ಯಾಣ ಸಂಸ್ಥೆ ಮತ್ತು ಇನ್ನೊಬ್ಬರು –ವಿರುದ್ಧ– ಉತ್ತರ ಪ್ರದೇಶ ರಾಜ್ಯ ಹಾಗೂ ಇನ್ನೊಬ್ಬರು*** [3], ಪ್ರಕರಣದ ನಿರ್ಣಯಗಳ ಮೇಲೆ ಅವಲಂಬಿಸಲಾಗಿದೆ. ಆದಾಗ್ಯೂ, ಫಿರ್ಯಾದುದಾರರು 'ದಾವೆಯ ನಂತರ ದಾವೆ' ಹೂಡಿಲ್ಲವೆಂಬುದನ್ನು ಗಮನಿಸಬೇಕಿದೆ. ಹಾಗಿದ್ದರೂ, ಈಗಾಗಲೇ ಪ್ರತ್ಯರ್ಜಿದಾರರ ಪರ ಮಾನ್ಯ ವಕೀಲರು ಹೇಳಿರುವಂತೆ, ಅಪೀಲಿನಲ್ಲಿ ಈ ನ್ಯಾಯಾಲಯದಿಂದ ಅಧಿಕೃತ ಸ್ವೀಕರ್ತನಿಗೆ ಮೀಸಲಾದ ಪರಿಹಾರವನ್ನು ಬೆಂಬತ್ತಿದ್ದಾರೆ. ಫಿರ್ಯಾದುದಾರನು ತನ್ನ ಪರವಾಗಿ ಡಿಕ್ರಿಯಿದ್ದು, ಅದು ಅಂತಿಮತೆಯನ್ನು ಹೊಂದಿದೆಯೆಂದು ಕ್ಲೇಮು ಮಾಡುವಲ್ಲಿ ಸರಿಯಾಗಿದ್ದಾನೆಂಬುದರಲ್ಲಿ ಯಾವುದೇ ಸಂದೇಹವಿಲ್ಲ. ದಾವೆಯಲ್ಲಿನ ಡಿಕ್ರಿಯನ್ನೇ ನ್ಯಾಯಾಲಯನಿಂದನೆಯೆಂದು ನಿರೂಪಿಸಲಾಗುವುದಿಲ್ಲವೆಂದು ಅಥವಾ ನ್ಯಾಯದ ಆಡಳಿತವನ್ನು ಬುಡಮೇಲು ಮಾಡುವ ಕಾರ್ಯವಿಧಾನವನ್ನು ಅಂಗೀಕರಿಸುವ ಅಥವಾ ಅದು, ಡಿಕ್ರಿದಾರನ ಕಾರ್ಯವನ್ನು ವ್ಯರ್ಥಗೊಳಿಸಲು ಮಾತ್ರವೇ ದಾವೆ ಹೂಡಿರುವ ಸ್ವರೂಪದಲ್ಲಿರುವುದನ್ನು ಪ್ರತ್ಯರ್ಜಿದಾರರು ಪ್ರಶ್ನಿಸಬಯಸಿದ್ದಾರೆ. ಇದೊಂದು ಸಮರ್ಥಿಸಬಹುದಾದ ಅಥವಾ ಸಮರ್ಥಿಸಲಾಗದ ಚಲಾಯಿತ ಹಕ್ಕಾಗಿದೆ. ಅದನ್ನು ಸಮರ್ಥಿಸಲು ಎತ್ತಲಾದ, ದಾವೆಯಲ್ಲಿನ ವಾದಗಳನ್ನು ಸುಸ್ಥಾಪಿಸುವುದು ಫಿರ್ಯಾದುದಾರನಿಗೆ ಸೇರಿದ ವಿಷಯವಾಗಿದ್ದು, ಅದು ಯಾವಾಗಲೂ ಅವನಿಗೆ ಲಭ್ಯವಾದುದಾಗಿದೆ. ದಾವೆಯನ್ನು ಪೂರ್ವನ್ಯಾಯನಿರ್ಣಯದಿಂದ ಪ್ರತಿಷೇಧಿಸಲಾಗಿದೆಯೆಂದು ವಾದಿಸಲಾಗಿದೆ ಹಾಗೂ ಅಂಥ ವಾದವನ್ನು ಸಮರ್ಥಿಸಬಹುದಾದಲ್ಲಿ ಅಧೀನ ನ್ಯಾಯಾಲಯವು ಪ್ರಾರಂಭಿಕ ವಿಷಯವನ್ನು ರೂಪಿಸುತ್ತದೆ ಹಾಗೂ ಆ ಆಪಾದನಾಂಶದ ಮೇಲೆ ದಾವೆಯನ್ನು ಬಹಳ ಸುಲಭವಾಗಿ ವಜಾ ಮಾಡಬಹುದಾಗಿದೆ ಹಾಗೂ ಪರಿಹಾರ ವೆಚ್ಚಗಳನ್ನು ಸಹ ಸಿವಿಲ್ ಪ್ರಕ್ರಿಯಾ ಸಂಹಿತೆಯ 35ಎ ಪ್ರಕರಣದಡಿ ಫಿರ್ಯಾದುದಾರನಿಗೆ ನೀಡಬಹುದಾಗಿದೆ.

3. (2008) 1 ಎಸ್‌ಸಿಸಿ 560

9. ಅಪೀಲಿನ ಸಮರ್ಥನೆಯಲ್ಲಿ ಫಿರ್ಯಾದುದಾರರ ಪರ ಮಾನ್ಯ ವಕೀಲರು ಉಲ್ಲೇಖಿಸಿದ ನಿರ್ಣಯಗಳು ಎಲ್ಲ ರೀತಿಯಲ್ಲಿ ಅನ್ವಯವಾಗುವುದಿಲ್ಲ. ***ವಿಜಯ ಬ್ಯಾಂಕ್ ಉದ್ಯೋಗಿಗಳ ವಸತಿ ಸಹಕಾರ ಸಂಘ ನಿಯಮಿತ –ವಿರುದ್ಧ– ನುನೀರಪ್ಪ (ಮೇಲಿನಂತೆ)*** ಪ್ರಕರಣದಲ್ಲಿನ ನಿರ್ಣಯದಿಂದ ಕಂಡು ಬಂದಿರುವಂತೆ, ಅದರಲ್ಲಿ ಆಪಾದಿತನು ಈ ನ್ಯಾಯಾಲಯದ ಮುಂದೆ ರಿಟ್ ಅರ್ಜಿಯ ಮೂಲಕ ದೂರುದಾರ ಸಂಘದ ಅನುಕೂಲಕ್ಕಾಗಿ ಸ್ವಾಧೀನದ ವ್ಯವಹರಣೆಗಳನ್ನು ಪ್ರಶ್ನಿಸಿದ್ದಾರೆ. ರಿಟ್ ಅರ್ಜಿಯನ್ನು ವಜಾ ಮಾಡಲಾಗಿದೆ. ರಿಟ್ ಅಪೀಲು ಸಂಖ್ಯೆ 1411/1987ರಲ್ಲಿ ಅಪೀಲು ಹೂಡಲಾಗಿದ್ದು, ಅದನ್ನು ಸಹ ವಜಾ ಮಾಡಲಾಯಿತು. ಆ ನಂತರ ವಿಫಲಗೊಂಡಿದ್ದ ಮೊಕದ್ದಮೆಯನ್ನು ಸಿವಿಲ್ ಅಪೀಲಿನಲ್ಲಿ ಸರ್ವೋಚ್ಚ ನ್ಯಾಯಾಲಯಕ್ಕೆ ತೆಗೆದುಕೊಂಡು ಹೋಗಲಾಯಿತು, ಮತ್ತು ವಿಷಯವು ಅಂತಿಮತೆಯನ್ನು ಹೊಂದಿತು. ಆ ನಂತರ ಆಪಾದಿತನು ಅವರ ಸ್ವತ್ತಿನೊಂದಿಗೆ ಹಸ್ತಕ್ಷೇಪ ಮಾಡಿದ ಪ್ರತಿವಾದಿ ಸಂಘದ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆ ಕೋರಿ, ಬೆಂಗಳೂರು ನಗರ ಸಿವಿಲ್ ನ್ಯಾಯಾಧೀಶರ ಕಡತದಲ್ಲಿ ಮೂಲ ದಾವೆ ಸಂಖ್ಯೆ 5579/1988ರಲ್ಲಿ ಸಿವಿಲ್ ದಾವೆಯನ್ನು ಹೂಡಿದ್ದಾನೆಂದು ಹೇಳಲಾಗಿದೆ. ಪಕ್ಷಕಾರರಿಗೆ ಯಥಾಸ್ಥಿತಿಯನ್ನು ಕಾಯ್ದುಕೊಳ್ಳಲು ನಿರ್ದೇಶಿಸಿ, ಏಕಪಕ್ಷೀಯ ಆದೇಶವನ್ನು ಹೊರಡಿಸಲಾಯಿತೆಂದು ಹೇಳಲಾಗಿದೆ. ಆ ನಂತರ ಮಧ್ಯಕಾಲೀನ ಆದೇಶವನ್ನು ತೆರವುಗೊಳಿಸುವುದಕ್ಕೆ ಅರ್ಜಿಗಳನ್ನು ಸಲ್ಲಿಸಲಾಯಿತು. ವಿಷಯವನ್ನು ಕಾಲಕಾಲಕ್ಕೆ ಮುಂದೂಡಲಾಯಿತು ಮತ್ತು ಯಥಾಸ್ಥಿತಿ ಕಾಯ್ದುಕೊಳ್ಳುವ ಆದೇಶವನ್ನು ಪುನರಾವರ್ತಿತವಾಗಿ ವಿಸ್ತರಿಸಲಾಯಿತು. ಇದು ಎಂಎಫ್ಎ ಸಂಖ್ಯೆ 755/1989ರಲ್ಲಿ ಈ ನ್ಯಾಯಾಲಯದ ಮುಂದೆ ಅಪೀಲು ಹೂಡುವುದಕ್ಕೆ ಕಾರಣವಾಯಿತು ಹಾಗೂ ಅಪೀಲನ್ನು ಅಂತಿಮವಾಗಿ ಪುರಸ್ಕರಿಸಲಾಯಿತು. ಅದಾದ ನಂತರ ಕೂಡಲೇ, ನಿರ್ಬಂಧಕಾಜ್ಞೆಗಾಗಿ ಬೆಂಗಳೂರಿನ ನಗರ ಸಿವಿಲ್ ನ್ಯಾಯಾಲಯದ ಸಮಕ್ಷಮದಲ್ಲಿಯೇ ಮೂಲ ದಾವೆ ಸಂಖ್ಯೆ 1773/1990ರಲ್ಲಿ ಮತ್ತೊಂದು ದಾವೆಯನ್ನು ಹೂಡಲಾಯಿತು ಮತ್ತು ಆ ದಾವೆಗೆ ದೂರುದಾರ ಸಂಘವನ್ನು ಜಾಣ್ಮೆಯಿಂದ ಪಕ್ಷಕಾರರನ್ನಾಗಿ ಸೇರಿಸಿರುವುದಿಲ್ಲ. ಆದರೂ, ದೂರುದಾರ ಸಂಘದ ಪದಾಧಿಕಾರಿಗಳು ಮತ್ತು ಕಂಟ್ರಾಕ್ಟರುಗಳನ್ನು ಪಕ್ಷಕಾರರನ್ನಾಗಿ ಮಾಡಲಾಯಿತು.

ನಿರ್ಬಂಧಕಾಜ್ಞೆಯ ಏಕಪಕ್ಷೀಯ ಆದೇಶವನ್ನು ನೀಡಲಾಯಿತು. ಪ್ರತಿವಾದಿಗಳು ಹಾಜರಾದರು ಮತ್ತು ತಡೆಯಾಜ್ಞೆಯನ್ನು ತೆರವುಗೊಳಿಸಲು ಅರ್ಜಿ ಸಲ್ಲಿಸಿದರು ಹಾಗೂ ಆ ನಂತರ, ನ್ಯಾಯಾಲಯಗಳ ನಿಂದನೆ ಅಧಿನಿಯಮ, 1971ರ 12ನೇ ಪ್ರಕರಣದಡಿ ಈ ನ್ಯಾಯಾಲಯದ ಮೊರೆ ಹೋದರು. ಆ ಹಿನ್ನೆಲೆಯಲ್ಲಿ, ಈ ನ್ಯಾಯಾಲಯದ ವಿಭಾಗೀಯ ಪೀಠವು, ಅದರಲ್ಲಿ ಆಪಾದಿತನ ಕಡೆಯಿಂದ ನಡವಳಿಕೆಗೆ ವಿನಾಯಿತಿ ಪಡೆಯಿತು. ಕೈಯಲ್ಲಿರುವ ಸದ್ಯದ ಪ್ರಕರಣವು ಅದೇ ರೀತಿಯ ಸನ್ನಿವೇಶಗಳಿಂದ ಕೂಡಿದೆಯೆಂದು ಹೇಳಲಾಗುವುದಿಲ್ಲ.

10. ಅದೇ ರೀತಿ, ***ಶ್ರೀ ಆರ್. ಸದಗೋಪನ್ –ವಿರುದ್ಧ– ಶ್ರೀ ಕೆ. ರಾಜಯ್ಯ*** (ಮೇಲಿನಂತೆ) ಪ್ರಕರಣದಲ್ಲಿಯೂ ಸಹ ಕುಪ್ಪುಸ್ವಾಮಿ ಮತ್ತು ಸಹೋದರ ರಾಜಯ್ಯ ಆಪಾದಿತರೆಂದು ಕಂಡು ಬಂದಿದೆ. ಅವರು ಮೆ॥ ಚಾಮುಂಡೇಶ್ವರಿ ಸ್ಟುಡಿಯೋ ಮತ್ತು ಲ್ಯಾಬೊರೇಟರಿ ಪ್ರೈವೇಟ್ ಲಿಮಿಟೆಡ್‌ನ ನಿರ್ದೇಶಕರಾಗಿರುತ್ತಾರೆ. ಕುಪ್ಪುಸ್ವಾಮಿಯು ಕೆ.ಕೆ. ಫೌಂಡೇಶನ್ ಮತ್ತು ಸಾರ್ವಜನಿಕ ಧರ್ಮಸಂಸ್ಥೆಯ ಹೆಸರಿನಲ್ಲಿ ಟ್ರಸ್ಟನ್ನು ಸ್ಥಾಪಿಸಿರುತ್ತಾರೆಂದು ಹೇಳಲಾಗಿದೆ. ಕುಪ್ಪುಸ್ವಾಮಿಯು ತನ್ನ ಎಸ್ಟೇಟನ್ನು ಫಿರ್ಯಾದುದಾರ, ಅವನ ಪತ್ನಿ ಮತ್ತು ಆಪಾದಿತನೂ ಸೇರಿದಂತೆ ವಿವಿಧ ಫಲಾನುಭವಿಗಳಿಗೆ ಉಯಿಲಿನ ಮೂಲಕ ಬರೆದಿರುತ್ತಾನೆಂದು ಹೇಳಲಾಗಿದೆ. ಕುಪ್ಪುಸ್ವಾಮಿಯು 4.3.2007ರಂದು ಮರಣ ಹೊಂದಿದ್ದಾನೆಂದು ಹೇಳಲಾಗಿದೆ. ಆಪಾದಿತನು ವಿಲ್‌ನ ಉತ್ತರಾಧಿಕಾರಿಗಳಾದ ಫಿರ್ಯಾದುದಾರ, ಅವನ ಪತ್ನಿ, ಮಗಳು, ಅಳಿಯ ಹಾಗೂ ಅವನ ತಂದೆ ತಾಯಿಗಳ ವಿರುದ್ಧ ಮೂಲ ದಾವೆ ಸಂಖ್ಯೆ 25543/2007ರಲ್ಲಿ ಬೆಂಗಳೂರಿನ ನಗರ ಸಿವಿಲ್ ನ್ಯಾಯಾಲಯದ ಮುಂದೆ ದಾವೆ ಹೂಡಿರುತ್ತಾನೆ ಮತ್ತು ತಾತ್ಕಾಲಿಕ ನಿರ್ಬಂಧಕಾಜ್ಞೆಯ ಮಧ್ಯಕಾಲೀನ ಆದೇಶವನ್ನು ನೀಡಲಾಗಿರುತ್ತದೆ ಮತ್ತು ಆ ನಂತರ ಅಧಿವಿಚಾರಣಾ ನ್ಯಾಯಾಲಯದಿಂದ ಅದನ್ನು ತೆರವುಗೊಳಿಸಲಾಗಿರುತ್ತದೆ. ತರುವಾಯ ಆಪಾದಿತನು ಬೆಂಗಳೂರಿನ ಅದೇ ನಗರ ಸಿವಿಲ್ ನ್ಯಾಯಾಲಯದಲ್ಲಿ ಮೂಲ ದಾವೆ ಸಂಖ್ಯೆ 25660/2007, ಮೂ.ದಾ.ಸಂ.25716/2007, ಮೂ.ದಾ.ಸಂ.25487/2007 ಹಾಗೂ ಮೂ.ದಾ. ಸಂ. 26992/2007ರಲ್ಲಿ ಸಿವಿಲ್ ದಾವೆಗಳನ್ನು ಹಾಗೂ ಚೆನ್ನೈನಲ್ಲಿ

ಕಂಪನಿ ಲಾ ಬೋರ್ಡ್ ಸಮಕ್ಷಮ ಕಂಪನಿ ಅರ್ಜಿ ಸಂಖ್ಯೆ 35/2007ನ್ನು ಸಲ್ಲಿಸಿರುತ್ತಾನೆ. ಅಷ್ಟೇ ಅಲ್ಲದೆ, ಅವನು ದಿವಂಗತ ಕುಪ್ಪುಸ್ವಾಮಿಯ ಎಸ್ಟೇಟಿನ ಆಡಳಿತಕ್ಕಾಗಿ, ಆಡಳಿತ ದಾವೆಯ ರೂಪದಲ್ಲಿ ನಗರ ಸಿವಿಲ್ ನ್ಯಾಯಾಲಯದ ಮುಂದೆ ಮೂಲ ದಾವೆ ಸಂಖ್ಯೆ, 25413/2008ರಲ್ಲಿ ಇನ್ನೊಂದು ದಾವೆಯನ್ನು ಸಹ ಹೂಡಿರುತ್ತಾನೆ. ಹಿಂದಿನ ಸಿವಿಲ್ ದಾವೆಗಳ ಸಲ್ಲಿಕೆ ಅಥವಾ ಇತ್ಯರ್ಥದ ಬಗ್ಗೆ ಯಾವುದೇ ನಮೂದು ಇರಲಿಲ್ಲವಾದ್ದರಿಂದ ಫಿರ್ಯಾದುದಾರನು ಸಲ್ಲಿಸಿದ ದಾವೆಗಳ ಬಹುಸಂಖ್ಯೆಯ ಮುಗ್ಗಟ್ಟಿನಿಂದ ನ್ಯಾಯದ ಯಥಾಕ್ರಮಕ್ಕೆ ಅಡಚಣೆ ಹಾಗೂ ತಡೆಯಷ್ಟೇ ಅಲ್ಲದೆ ಒಟ್ಟಿಗೆ ಅನೇಕ ದಾವೆಗಳು ಕಾನೂನು ಪ್ರಕ್ರಿಯೆಯ ನಿಂದನೆಗೆ ಸಮವಾಗಿರುತ್ತದೆ. ಈ ಮೇಲಿನದರ ಹಿನ್ನೆಲೆಯಲ್ಲಿ, ಈ ನ್ಯಾಯಾಲಯವು ಅದರಲ್ಲಿನ ಆಪಾದಿತನ ನಡವಳಿಕೆಗೆ ವಿನಾಯಿತಿ ತೆಗೆದುಕೊಂಡಿರುತ್ತದೆ. ಆದುದರಿಂದ ಕೈಯಲ್ಲಿರುವ ಸದ್ಯದ ಪ್ರಕರಣದಂತೆ, ಅದೇ ರೀತಿಯ ಸನ್ನಿವೇಶಗಳಲ್ಲಿ ಹೀಗಿರುತ್ತದೆಂದು ಹೇಳಲಾಗುವುದಿಲ್ಲ.

11. ***ಉದ್ಯಮಿ ಏವಂ ಖಾದಿ ಗ್ರಾಮೋದ್ಯೋಗ ಕಲ್ಯಾಣ ಸಂಸ್ಥೆ ಮತ್ತು ಇನ್ನೊಬ್ಬರು –ವಿರುದ್ಧ– ಉತ್ತರ ಪ್ರದೇಶ ರಾಜ್ಯ ಹಾಗೂ ಇನ್ನೊಬ್ಬರು*** (ಮೇಲಿನಂತೆ) ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ಸಮಕ್ಷಮದಲ್ಲಿ, ಅಪೀಲುದಾರರು ಒಂದು ಸಹಕಾರ ಸಂಘವಾಗಿದ್ದು, ಅಲ್ಯುಮಿನಿಯಂ ಪಾತ್ರೆಗಳ ತಯಾರಿಕೆಗಾಗಿ ಕೈಗಾರಿಕೆಯ ಸ್ಥಾಪನೆಗೆ ಸಾಲಕ್ಕಾಗಿ ಅರ್ಜಿ ಹಾಕಿರುತ್ತದೆ. ಸಾಲವು 1991ರ ವರ್ಷದಲ್ಲಿ ಮಂಜೂರಾಗಿರುತ್ತದೆ ಮತ್ತು ಮೊತ್ತದ ಒಂದು ಭಾಗವನ್ನು ಪ್ರತ್ಯರ್ಜಿದಾರರು ಬಿಡುಗಡೆ ಮಾಡಿರುತ್ತಾರಾದರೂ, ಇನ್ನೊಂದು ಮೊತ್ತವು 1996ರಲ್ಲಿ ಮಂಜೂರಾಗಿರುತ್ತದೆ ಮತ್ತು ಪಿವಿಸಿ ಶೂ ಸೋಲ್‌ಗಳ ತಯಾರಿಕೆಯಲ್ಲಿ ಒಂದು ಘಟಕವನ್ನು ಸ್ಥಾಪಿಸಲು ಕನ್ಸೊರ್ಟಿಯಂ ಬ್ಯಾಂಕ್ ಕ್ರೆಡಿಟ್ ಸ್ಕೀಂ ಅಡಿಯಲ್ಲಿ ಇನ್ನಷ್ಟು ಮೊತ್ತದ ಸಾಲದ ಅನುದಾನಕ್ಕಾಗಿ ಅರ್ಜಿ ಸಲ್ಲಿಸಲಾಗಿರುತ್ತದೆ. ರೂ.16.20 ಲಕ್ಷದ ಮೊತ್ತವು ಮಂಜೂರಾಗಿರುತ್ತದೆ ಹಾಗೂ ರೂ.13.20 ಲಕ್ಷ ಬಿಡುಗಡೆಯಾಗಿರುತ್ತದೆ. ಸಂಘವು ಹಣ ಪಾವತಿ ಮಾಡುವಲ್ಲಿ, ಹೇಳಲಾದಂತೆ ತಪ್ಪಿತಸ್ಥವಾಗಿದೆ ಹಾಗೂ ವಸೂಲಿ ವ್ಯವಹರಣೆಗಳನ್ನು ಕೈಗೊಳ್ಳಲಾಗಿರುತ್ತದೆ.

ವಸೂಲಿ ವ್ಯವಹರಣೆಗಳ ಕಾನೂನುಬದ್ಧತೆಯನ್ನು ಪ್ರಶ್ನಿಸಿ ಹಲವಾರು ರಿಟ್ ಅರ್ಜಿಗಳನ್ನು ಸಲ್ಲಿಸಲಾಗಿರುತ್ತದೆ. ಸಾರ್ವಜನಿಕ ಹಿತಾಸಕ್ತಿ ವ್ಯಾಜ್ಯೆ ಅರ್ಜಿಗಳನ್ನು ಸಹ ಸಲ್ಲಿಸಲಾಗಿದ್ದು, ಅದರಲ್ಲಿ ಅಪೀಲುದಾರನು ಈ ಮುಂದಿನ ಪರಿಹಾರಗಳಿಗಾಗಿ ಪಕ್ಷಕಾರನು ಸಹ ಆಗಿರುತ್ತಾನೆ;

> *(i) ಯು.ಪಿ. ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧಿನಿಯಮ, 1960ರ 35ಎ ಪ್ರಕರಣಗಳ ಉಪಬಂಧಗಳನ್ನು ಕಾನೂನು ಬಾಹಿರವೆಂದು ನಿರ್ಧರಿಸುವುದು;*
>
> *(ii) ವಸೂಲಿ ಪ್ರಮಾಣಪತ್ರಗಳನ್ನು ರದ್ದುಪಡಿಸಲು ದಾಖಲೆ ಕೇಳಿಕೆಯ ಸ್ವರೂಪದಲ್ಲಿ ರಿಟ್ ನೀಡುವುದು; ಮತ್ತು*
>
> *(iii) ಭೂ ಕಂದಾಯದ ಅದೇ ಬಾಕಿಗಳ ವಸೂಲಿಗಿಂತ ಬೇರೆಯಾದ, ನ್ಯಾಯದ ಯಥಾಸ್ಥಿತಿಯ ಮುಖಾಂತರ, ಅರ್ಜಿದಾರರ ಸಂಘದ ಸದಸ್ಯರುಗಳ ವಿರುದ್ಧ ಬಾಕಿ ಇರುವ ಮೊತ್ತವನ್ನು ವಸೂಲಿ ಮಾಡಲು ವಿರುದ್ಧ ಪಕ್ಷಕಾರರನ್ನು ನಿಯಂತ್ರಿಸಲು ಮ್ಯಾಂಡಮಸ್ ಸ್ವರೂಪದಲ್ಲಿ ನಿರ್ದೇಶನಕ್ಕಾಗಿ.*

12. ಅಷ್ಟೇ ಅಲ್ಲದೆ, ಪ್ರತ್ಯರ್ಜಿದಾರರ ಪರವಾಗಿ ಸಲ್ಲಿಸಲಾದ ಕೌಂಟರ್ ಅಫಿಡವಿಟ್‌ನಲ್ಲಿ ಹೇಳಲಾದಂತೆ, ಅಪೀಲುದಾರನು ಇತರ ರಿಟ್ ಅರ್ಜಿಗಳನ್ನು ಸಹ ಸಲ್ಲಿಸಿದ್ದಾನೆಂದು ತಿಳಿದುಬರುತ್ತದೆ. ಹಾಗಿದ್ದರೂ, ಹೊಸ ವಸೂಲಿ ವ್ಯವಹರಣೆಗಳನ್ನು ಕೈಗೊಳ್ಳಲಾಗಿದ್ದು, ಅವು ರಿಟ್ ಅರ್ಜಿಯಲ್ಲಿ ಪ್ರಶ್ನೆಯ ವಸ್ತುವಿಷಯವಾಗಿರುವುದಿಲ್ಲ. ಹೊಸ ರಿಟ್ ಅರ್ಜಿಯನ್ನು ಸಲ್ಲಿಸಲಾಗಿದ್ದು, ಅಪೀಲುದಾರರು ಮುಖ್ಯ ಸಂಗತಿಗಳನ್ನು ಮುಚ್ಚಿಟ್ಟಿದ್ದಾರೆ, ಎಂದರೆ, ಒಂದೇ

ವ್ಯಾಜ್ಯ ಕಾರಣದ ಮೇಲೆ ನಾಲ್ಕು ರಿಟ್ ಅರ್ಜಿಗಳನ್ನು ಸಲ್ಲಿಸಿರುತ್ತಾರೆ ಮತ್ತು ಹೀಗಾಗಿ ಅದು ಸಮರ್ಥನೀಯವಾಗಿಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆಂದು ತೀರ್ಮಾನಿಸಿದ ಪ್ರಶ್ನಿತ ತೀರ್ಪಿನ ಕಾರಣದಿಂದ ಅದನ್ನು ಸಲ್ಲಿಸಲಾಯಿತು. ಸರ್ವೋಚ್ಚ ನ್ಯಾಯಾಲಯದ ಮುಂದೆ ಪ್ರಶ್ನೆಯಲ್ಲಿದ್ದುದು ಇದೇ ಆದೇಶವಾಗಿರುತ್ತದೆ. ಸರ್ವೋಚ್ಚ ನ್ಯಾಯಾಲಯವು, ಅಪೀಲುದಾರರ ಕಡೆಯಿಂದಾದ ಪ್ರಯತ್ನವು ಖಂಡಿತವಾಗಿಯೂ ನ್ಯಾಯಪ್ರಕ್ರಿಯೆಯ ನಿಂದನೆಯಾಗಿದೆಯೆಂದು ಅಭಿಪ್ರಾಯಪಟ್ಟಿದೆ. ಆದುದರಿಂದ, ಮೇಲ್ಕಂಡ ಸಂದರ್ಭಗಳು ಕೈಯಲ್ಲಿರುವ ಪ್ರಸ್ತುತ ಪ್ರಕರಣದಲ್ಲಿ ಕಂಡುಬರುವಂಥ ಸಂದರ್ಭಗಳಿಗೆ ಸಮಾನಾಂತರವಾಗಿವೆಯೆಂದು ಹೇಳಲಾಗುವುದಿಲ್ಲ.

13. ಹೀಗಾಗಿ, ನಮ್ಮ ಅಭಿಪ್ರಾಯದಲ್ಲಿ ಫಿರ್ಯಾದುದಾರನು ಪ್ರತ್ಯರ್ಜಿದಾರರ – ಆಪಾದಿತರ ವಿರುದ್ಧವಾಗಿ ನ್ಯಾಯಾಲಯದ ಕ್ರಿಮಿನಲ್ ನಿಂದನೆಯ ಮೊಕದ್ದಮೆ ಹೂಡಿರುವುದಿಲ್ಲ. ದೂರನ್ನು ತಿರಸ್ಕರಿಸಲಾಗಿದೆ.

---